# ಒಲ್ಲದ ಮನಸ್ಸಿನಿಂದ ಬಂದು ಇಲ್ಲೇ ನೆಲೆ ನಿಂತೆ

**ಲತಾ**
**ಉದಯ 'ಕ್ಷಮಾ'ದ ಜಾಹ್ನವಿ**



**◆ ಜಾಹ್ನವಿ ಹೇಗಿದ್ದಾಳೆ? ಅವಳ ಬಗ್ಗೆ ಹೇಳುವುದಾದರೆ...**

ಏಕ ಪೋಷಕರ ಪಾಲನೆಯಲ್ಲಿ ಬೆಳೆಯುವ ಕಥೆ. ಜಾಹ್ನವಿ ಬಜಾರಿ, ಇದ್ದಂಗೆ ನೇರವಾಗಿ ಹೇಳುತ್ತಾಳೆ. ಯಾರ ಮುಲಾಜಿಗೂ ಒಳಗಾಗುವುದಿಲ್ಲ ತನ್ನ ಹಿತವನ್ನಷ್ಟೇ ಬಯಸುವ ಸ್ವಾರ್ಥಿ. ಹೇಳಿದ ಮಾತು ಕೇಳಲ್ಲ. ಮನೆಯಲ್ಲಿ ಅವಳು ಹೇಳಿದ್ದೇ ನಡೆಯಬೇಕು. ಚೆನ್ನಾಗಿ ಓದುತ್ತಾಳೆ. ಅದೂ ಕೂಡ ಅವಳ ಅಹಂಕಾರಕ್ಕೆ ಕಾರಣವಾಗಿದೆ. ಅಪ್ಪನ ಮೇಲೆ ಪ್ರೀತಿ ಜಾಸ್ತಿ. ಅಮ್ಮ ಎಷ್ಟೇ ಸಹಾಯ ಮಾಡಿದರೂ ಕೃತಜ್ಞತೆ ಇಲ್ಲ. ಅಪ್ಪ ಮನೆ ಬಿಟ್ಟು ಹೋಗಲು ನೀನೇ ಕಾರಣ ಎಂದು ದೂಷಿಸುತ್ತಾಳೆ. ತಮ್ಮನ ಜೊತೆ ಜಗಳ ಮಾಡ್ತಾಳೆ. ತನ್ನನ್ನು ಯಾರು ಅರ್ಥ ಮಾಡಿಕೊಳ್ಳುವುದಿಲ್ಲ ಎನ್ನುವ ಹಟ. ಸಹನೆ ತುಂಬಾ ಕಡಿಮೆ.

**◆ ಏನೋ ಆಗಬೇಕಿತ್ತು... ಇನ್ನೇನೋ ಆದೆ ಎನ್ನುವ ಕೊರಗು ಕಾಡುತ್ತಾ?**

ನಮ್ಮ ಸ್ನೇಹಿತರ ತಂದೆ ಸಿನಿಮಾವೊಂದನ್ನು ನಿರ್ಮಿಸಿದ್ದರು. ಅವರು ಸಿನಿಮಾ ತೋರಿಸಲು ನಮ್ಮನ್ನೂ ಆಹ್ವಾನಿಸಿದ್ದರು. ಕುಟುಂಬ ಸಮೇತರಾಗಿ ಸಿನಿಮಾ ನೋಡಲು ಹೋದಾಗ ಅಲ್ಲಿ ಒಬ್ಬರು ಅಪ್ಪನಿಗೆ ನಿಮ್ಮ ಮಗಳನ್ನು ಆ್ಯಕ್ಟಿಂಗ್‌ಗೆ ಕಳುಹಿಸಿ ಎಂದಿದ್ದಾರೆ. ಇದು ತುಂಬ ಅನಿರೀಕ್ಷಿತ ಪಯಣ. ಈಗ ಎಂಬಿಎ ಓದುತ್ತಿದ್ದೇನೆ. ನನ್ನಿಷ್ಟದ ಐಟಿ ಕ್ಷೇತ್ರ ಕೈ ಬಿಟ್ಟಿದ್ದೇನೆ. ಅಪ್ಪ ಹೇಳಿದರೆಂದು ಆಡಿಷನ್ನಿಗೆ ಹೋದೆ. ಮರು ದಿನವೇ 'ಅನುರಾಗ ಸಂಗಮ'ಕ್ಕೆ ಕ್ಯಾಮೆರಾ ಎದುರಿಸಿದೆ. ಏನೋ ಒಂದು ಅವಕಾಶ ಸಿಕ್ಕಿದೆ ಏಕೆ ಸುಮ್ಮನೆ ಕಳೆದುಕೊಳ್ಳಬೇಕು ಎಂದೇ ಬಂದೆ. ಮುಂದೆ ನನ್ನ ಎದುರು ಕಾಲೇಜು ಇತ್ತೇ ಹೊರತು ಕ್ಯಾಮೆರಾ ಇರಲಿಲ್ಲ. ಆದರೆ ಆಗಿದ್ದೇ ಬೇರೆ. ಒಂದು ಅವಕಾಶದ ನಂತರ ಮತ್ತೊಂದು ಎನ್ನುತ್ತಾ ಹಲವು ಅವಕಾಶಗಳು ಸಿಕ್ಕವು. ಇಂಡಸ್ಟ್ರೀ ಬಿಟ್ಟು ಹೋಗುವ ಮನಸ್ಸು ಬರಲೇ ಇಲ್ಲ. ತೀವ್ರ ಸ್ಪರ್ಧೆಯ ಈ ಹೊತ್ತಿನಲ್ಲಿ ನಿರಾಯಾಸವಾಗಿ ಸಿಗುವ ಅವಕಾಶವನ್ನು ಏಕೆ ಕಳೆದುಕೊಳ್ಳಬೇಕು. 'ರಾಧಾ ಸರ್ಚಿಂಗ್ ರಮಣ ಮಿಸ್ಸಿಂಗ್' ಸಿನಿಮಾ ಆರಂಭ ಆಗಿದೆ. ಹೊಸ ತಂಡ ಸಿನಿಮಾ ಮಾಡುತ್ತಿದೆ. ಬೆಳ್ಳಿತೆರೆಗೆ ಹೊಸಬಳಾದ ನಾನೂ ಅದರಲ್ಲಿ ಪಾತ್ರ ನಿರ್ವಹಿಸುತ್ತಿದ್ದೇನೆ.

**◆ ನಿಮ್ಮ ಜನಪ್ರಿಯತೆ ನಿಮಗೆ ಗೊತ್ತಾದ ಬಗೆ ಹೇಗೆ?**

ನನಗೆ ಜನಪ್ರಿಯತೆ ಅನ್ನುವುದನ್ನು 'ಮನೆದೇವ್ರು' ಕೊಡ್ತು ಎಂದುಕೊಂಡಿದ್ದೇನೆ. ಏಕೆಂದರೆ ಆ ನಂತರವೇ ನನ್ನನ್ನೂ ಗುರುತಿಸುವುದು ಕಾಣಿಸಿತು. ಅದೆಲ್ಲ ನನಗೆ ಹೊಸತು. ತುಂಬಾ ಚೆಂದ ಮಾಡ್ತಿಯ ಪುಟ್ಟಿ. ಮುದ್ದು ಮುದ್ದು ಕಾಣ್ತೀಯಾ ಫೋಟೊ ತೆಗೆದುಕೊಳ್ಳುತ್ತೇವೆ ಎಂದು ಕೇಳುತ್ತಾರೆ. ಯುವಜನರಿಂದ ಹಿರಿಯರ ತನಕ ನಿಸ್ವಾರ್ಥದ ಪ್ರೀತಿಯನ್ನು ಕಂಡಿದ್ದೇನೆ. ಅದು ನನ್ನಲ್ಲಿ ಮತ್ತಷ್ಟು ಹಸಿವನ್ನು ಹೆಚ್ಚಿಸಿದೆ. ಭಿನ್ನ ಭಿನ್ನ ಪಾತ್ರಗಳನ್ನು ನಿರ್ವಹಿಸಬೇಕು ಎನ್ನುವ ಭಾವನೆಯನ್ನು ಹುಟ್ಟಿಸಿದೆ.

**◆ ಅಪ್ಪ ನಿಮ್ಮ ಬಗ್ಗೆ ತುಂಬ ಜಾಗೃತಿ ವಹಿಸುತ್ತಾರಾ?**

ಅಪ್ಪ ಗಿರೀಶ್ ತುಂಬಾ ಕೇರ್. ಒಂದು ಕಂಪನಿಯಲ್ಲಿ ವ್ಯವಸ್ಥಾಪಕರು. ಅವರ ಬಯಕೆಯಂತೆಯೇ ನಟಿಯಾಗಿದ್ದೇನೆ. ತಾಯಿ ಚಂದ್ರಕಲಾ ಗೃಹಿಣಿ. ಅಪ್ಪನಿಗೆ ಸಿನಿಮಾ ಹುಚ್ಚು ಜಾಸ್ತಿ. ಸಿನಿಮಾ ನೋಡಲು ಭಾನುವಾರಕ್ಕಾಗಿ ಕಾದು ಕುಳಿತಿರುತ್ತಾರೆ. ನಮ್ಮ ಸಂಬಂಧಿಕರಿಗೆ– ಸ್ನೇಹಿತರಿಗೆ ನನ್ನ ಮಗಳ ಧಾರಾವಾಹಿ ನೋಡಿ ಎಂದು ಅವರೇ ಪ್ರಚಾರ ಮಾಡುತ್ತಾರೆ. 'ಕ್ಷಮಾ' ಧಾರಾವಾಹಿ ಪ್ರಚಾರದ ಫೋಟೊವನ್ನು ಬ್ಯಾನರ್ ಮಾಡಿಸಿಕೊಂಡು ನನಗೆ ಗಿಫ್ಟ್ ಮಾಡಿದ್ದರು. ನಂತರ ಅದನ್ನು ನಮ್ಮ ಮನೆ ಗೇಟಿಗೆ ಹಾಕಿದ್ದಾರೆ. ಒಟ್ಟಾರೆ ನನ್ನನ್ನು ತುಂಬಾ ಪ್ರಭಾವಿಸಿದ್ದಾರೆ.

**◆ ಶೂಟಿಂಗ್‌ನ ಮೊದಲ ದಿನ ಹೇಗಿತ್ತು?**

ಬೆರಗಾಗಿ ಹೋಗಿದ್ದೆ. ಮೊದಲ ದಿನ ನನ್ನ ಅಪ್ಪನ ಜೊತೆ ಶೂಟಿಂಗ್ ಮನೆಗೆ ಹೋಗಿದ್ದೆ. ಮೇಕಪ್ ಅಂತ ಮಾಡಿದರು. ಟೀವಿಯಲ್ಲಿ ಮಾತ್ರ ಶೂಟಿಂಗ್ ನೋಡಿದ್ದೆ. ನಾನೂ ರೆಡಿಯಾಗಿ ಕೂತು, ದಿನವಿಡೀ ಕಾದು ಕಾದು ಸಹವಾಸವೇ ಬೇಡ ಎಂದು ಅಂದು ಅನ್ನಿಸಿತ್ತು. ಒಂದು ಶಾಟ್‌ಗೆ ಬೇರೆ ಬೇರೆ ಆ್ಯಂಗಲ್ ಫೋಟೊ ತೆಗೆದುಕೊಳ್ಳುವುದು, ಬೋರ್ ಹೊಡೆಸಿತ್ತು. ಮರುದಿನ ಶೂಟಿಂಗ್‌ಗೆ ಬರುವುದೇ ಬೇಡ ಎಂದು ಮನೆಗೆ ಬಂದೆ. ಮರುದಿನ ಶೂಟಿಂಗ್ ಹೋಗಲ್ಲ ಎಂದು ಅಳ್ತಾ ಇದ್ದೆ. ಕಾಲೇಜು ಬಿಟ್ಟು ಅಲ್ಲಿ ಮೇಕಪ್ ಹಾಕಿಕೊಂಡು ಕಾದು ಕೂರಲು ಆಗಲ್ಲ ಎಂದು ಹಟ ಹಿಡಿದಿದ್ದೆ. ನನ್ನ ಪಾತ್ರವೇ ರಿಪ್ಲೇಸ್, ಹೀಗಿರುವಾಗ ಹೋಗುವುದು ಅನಿವಾರ್ಯವಾಗಿತ್ತು. ಒಲ್ಲದ ಮನಸ್ಸಿನಿಂದ ಹೋಗುತ್ತಿದ್ದೆ. ಕಾಲೇಜು ಬಿಡಲು ಇಷ್ಟ ಇರಲಿಲ್ಲ. ಆದರೆ ಈಗ ಯಾಕಾದರೂ ಬ್ರೇಕ್ ಸಿಗುತ್ತೋ ಅನ್ನೋ ಹಾಗೆ ಬದಲಾಗಿದೆ.

■ **ರಾಘವೇಂದ್ರ ಕೆ.**